ದಿವಾಣಿ ನ್ಯಾಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಿತ್ತೂರ.

ದಿನಾಂಕಃ 10.06.2026 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಪಿ ಬಿ ಟಿ ವಕೀಲರಿಂದಃ**

1. 9 ಅಂಚೆ ಸ್ವೀಕೃತಿಗಳನ್ನು ನಿಪಿ-13 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಸರ್ಕಾರಿ ವಕೀಲರಿಂದಃ**

ನನ್ನ ಮಗನ ಹೆಸರು ಶಿವರಂಜನ ತಂದೆ ಕಲ್ಲಪ್ಪಾ ತಾಂಡ್ಸಿ, ಜನನ ದಿನಾಂಕ ಗೊತ್ತಿಲ್ಲ. ಈಗ 17 ವರ್ಷ ವಯಸ್ಸಾಗಿವೆ. ಪಾಲಕರು ಹೇಳಿದ ಹಾಗೇ ಮಕ್ಕಳ ಹೆಸರನ್ನು ಶಾಲೆಯಲ್ಲಿ ಬರೆಯುತ್ತಾರೆ ಎಂದರೆ ಸರಿ. ಆದರೆ ನನ್ನ ಮಗನ ಹೆಸರ ತಪ್ಪಾಗಿ ಕಾಣಿಸಲಾಗಿದೆ. ನನ್ನ ಮಗನ ಹೆಸರನ್ನು ಶಾಲೆಯವರು ನಾನು ಹೇಳಿದಂತೆ ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ಸಂಬಂಧಪಟ್ಟ ದಾಖಲೆಗಳನ್ನು ನೋಡಿ ಹೆಸರನ್ನು ನಮೂದು ಮಾಡಲಾಗುತ್ತದೆ ಎಂದರೆ ಸರಿ. ಜನನ ದಾಖಲೆಯಲ್ಲೂ ಸಹ ನಾನು ಹೇಳಿದ ಹಾಗೇ ಹೆಸರನ್ನು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಮಗನ ಹೆಸರನ್ನು ತಿದ್ದುಪಡಿ ಮಾಡಲು ಶಾಲೆಗೆ ಅರ್ಜಿ ಕೊಟ್ಟಿಲ್ಲ. ಪ್ರತಿವಾದಿಯವರು ಹೆಸರು ತಿದ್ದುಪಡಿ ಮಾಡಲಾಗುವುದಿಲ್ಲ ಎಂದು ಮೌಖಿಕವಾಗಿ ನಮಗೆ ತಿಳಿಸಿರುತ್ತಾರೆ. ನನ್ನ ಮಗನ ಹೆಸರನ್ನು ನಾನು ಹೇಳಿದ ಹಾಗೇ ಪ್ರತಿವಾದಿಯವರು ದಾಖಲು ಮಾಡಿಕೊಂಡಿದ್ದಾರೆ,

ಅವರದು ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ನನ್ನ ಮಗನ ಸರಿಯಾದ ಹೆಸರು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕಿತ್ತೂರ.